**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 74/2020**

**ಚಾ.ಸಾ. :-1**
**ಪ್ರಾ.ಸಾ. :-6**

| | |
|---|---|
| ಹೆಸರು | : ಕುಮಾರ |
| ತಂದೆಯ ಹೆಸರು | : ಗೋಪಾಲಯ್ಯ |
| ವಯಸ್ಸು | : 68 ವರ್ಷ |
| ಉದ್ಯೋಗ | : ಕೂಲಿ |
| ವಾಸಸ್ಥಳ | : ಪಾಲಹಳ್ಳಿ ಗ್ರಾಮ |

---

**ಪ್ರಮಾಣೀಕರಿಸಲಾದ ದಿನಾಂಕಃ- 23.03.2026**

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>**

ಮೃತ ಪುಟ್ಟನಂಜಮ್ಮ ನನ್ನ ಪತ್ನಿ. ಸುಮಾರು 6 ವರ್ಷಗಳ ಹಿಂದೆ ಪಶ್ಚಿಮ ವಾಹಿನಿಯ ಬಳಿ ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ನಾನು ಮತ್ತು ಹೆಂಡತಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದು, ಆ ಸಮಯದಲ್ಲಿ ನಮ್ಮ ಹಿಂಭಾಗದಿಂದ ಬಂದಂತಹ ಲಾರಿಯು ನಮ್ಮ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ. ಆ ಸಮಯದಲ್ಲಿ ನಾನು ಫೂಟ್‌ಪಾತ್ ನಲ್ಲಿ ವಾಹನ ಚಾಲನೆ ಮಾಡುತ್ತಿದ್ದೆ. ಅಪಘಾತದ ನಂತರ ನನಗೆ ಕೈ ಮೂಳೆ ಮುರಿದಿರುತ್ತದೆ ಹಾಗೂ ನನ್ನ ಪತ್ನಿಗೆ ತೀವ್ರ ಗಾಯಗಳಾಗಿದ್ದು ಮಾರನೇ ದಿನ ಮೃತಪಟ್ಟಿರುತ್ತಾರೆ.

ಅಪಘಾತದ ಬಗ್ಗೆ ಪೊಲೀಸರಿಗೆ ಹೇಳಿಕೆ ದೂರು ನೀಡಿರುತ್ತೇನೆ. ಸಾಕ್ಷಿಯ ಹೆಬ್ಬೆಟ್ಟಿನ ಗುರುತು ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರ್ತಿಸಲಾಗಿದೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ನಾವು ಆ ದಿನ ಶ್ರೀರಂಗಪಟ್ಟಣದಿಂದ ಪಾಲಹಳ್ಳಿಗೆ ಹೋಗುತ್ತಿದ್ದೆವು. ನನ್ನ ಹೆಂಡತಿ ದ್ವಿಚಕ್ರ ವಾಹನದ ಹಿಂಭಾಗದಲ್ಲಿ ಕುಳಿತಿದ್ದರು. ನನ್ನ ಹೆಂಡತಿ ಸೀರೆ ಧರಿಸಿದ್ದರು. ನನ್ನ ಹೆಂಡತಿ ವಾಹನದಲ್ಲಿ ಎಡಭಾಗಕ್ಕೆ ಎರಡು ಕಾಲು ಬಿಟ್ಟು ಕುಳಿತಿದ್ದರು. ಎಂ.ಕೆ.ಫ್ಯಾಕ್ಟರಿ ಬಳಿ ರಸ್ತೆ ಉಬ್ಬು ಇರುತ್ತದೆ ಎಂದರೆ ಸರಿ. ಮುಂದೆ ಹೋಗುತ್ತಿದ್ದ ಲಾರಿಯನ್ನು ನಾನು ಓವರ್ ಟೇಕ್ ಮಾಡಿಕೊಂಡು ಹೋಗಲು ಪ್ರಯತ್ನಿಸಿರುತ್ತೇನೆ ಎಂದರೆ ಸುಳ್ಳು. ಆ ರೀತಿ ಓವರ್ ಟೇಕ್ ಮಾಡುವಾಗ ನಾನು ನಿಯಂತ್ರಣ ತಪ್ಪಿ ಬಿದ್ದಿರುತ್ತೇನೆ ಎಂದರೆ ಸುಳ್ಳು. ಸದರಿ ಲಾರಿಯಲ್ಲಿ ಸರಕು ಇತ್ತು ಎಂದರೆ ನನಗೆ ಗೊತ್ತಿಲ್ಲ.

ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಗಿ ಇರುವುದಿಲ್ಲ. ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಬರುವುದಿಲ್ಲ ಹಾಗೂ ಆ ಕಾರಣದಿಂದಲೇ ನಾನು ವಾಹನವನ್ನು ಆ ಸಮಯದಲ್ಲಿ ಸರಿಯಾಗಿ ನಿಯಂತ್ರಿಸದೇ ಬಿದ್ದು ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾವು ವಾಹನದಿಂದ ಬಿದ್ದಾಗ ರಸ್ತೆಯಲ್ಲಿ ಹೋಗುವವರು ನಮಗೆ ಪ್ರಥಮ ಚಿಕಿತ್ಸೆ ನೀಡಿರುತ್ತಾರೆ.

ಲಾರಿ ನಮ್ಮ ವಾಹನಕ್ಕೆ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**